ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ

ಕ್ರಮ ಸಂಖ್ಯೆ: 3224-43/2025

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಶಿವಮೊಗ್ಗ. ದಿನಾಂಕಃ **06.02.2025**

ಬಹಿರಂಗ ಹರಾಜು ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಶಿವಮೊಗ್ಗದ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ಕಛೇರಿಯ ಈ ಪ್ರಕಟಣೆಯ ಅನುಬಂಧದಲ್ಲಿ ನಮೂದಿಸಿರುವ ಹಳೆಯಃ ಅನುಪಯುಕ್ತ ಪೀಠೋಪಕರಣಗಳು ಹಾಗೂ ಇತರೆ ವಸ್ತುಗಳನ್ನು "ಯಾವ ಸ್ಥಿತಿಯಲ್ಲಿ ಇದೆಯೋ, ಅದೇ ಸ್ಥಿತಿಯಲ್ಲಿ" ಬಹಿರಂಗ ಹರಾಜು ಮೂಲಕ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ವಿಲೇವಾರಿ ಮಾಡಲು ಪ್ರಕಟಣೆಯನ್ನು ಹೊರಡಿಸಲಾಗಿದೆ. ಹಳೆಯಃಅನುಪಯುಕ್ತ ಪೀಠೋಪಕರಣಗಳನ್ನು ಹಾಗೂ ಇತರೆ ವಸ್ತುಗಳನ್ನು ಶಿವಮೊಗ್ಗದ ಬಾಲರಾಜ್ ಅರಸ್ ರಸ್ತೆಯಲ್ಲಿರುವ ಜಿಲ್ಲಾ ನ್ಯಾಯಾಲಯ ಸಂಕೀರ್ಣದ ಮೊದಲನೇ ಮಹಡಿಯ ಮೇಲ್ಬಾಗದ ಟೆರೇಸ್ ಮೇಲೆ ಇರಿಸಲಾಗಿದ್ದು, ಹರಾಜು ಪ್ರಕ್ರಿಯೆಯನ್ನು ಪೀಠೋಪಕರಣಗಳು ಇರುವ ಸ್ಥಳದಲ್ಲಿಯೇ ಅಂದರೆ ಜಿಲ್ಲಾ ನ್ಯಾಯಾಲಯ ಸಂಕೀರ್ಣದ ಮೊದಲನೇ ಮಹಡಿಯ ಮೇಲ್ಬಾಗದ ಟೆರೇಸ್ ಮೇಲೆ ದಿನಾಂಕಃ **22..02.2025** ರಂದು ಮಧ್ಯಾಹ್ನ **2.30** ಕ್ಕೆ ಸರಿಯಾಗಿ ಪ್ರಾರಂಭಿಸಲಾಗುವುದು.

ಷರತ್ತುಗಳುಃ

1) ಅನುಪಯುಕ್ತ ಪೀಠೋಪಕರಣಗಳನ್ನು ಲಾಟ್‌ಗಳನ್ನಾಗಿ ಮಾಡಿ ಹರಾಜು ಮಾಡಲಾಗುವುದು.

2) ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವ ಬಿಡ್ದುದಾರರು ಇತ್ತೀಚಿನ ಭಾವ ಚಿತ್ರವಿರುವ ಗುರುತಿನ ಚೀಟಿಃ ಆಧಾರ್ ಕಾರ್ಡ್ : ಪಡಿತರ ಚೀಟಿಗಳಲ್ಲಿ ಯಾವುದಾದರೂ ಒಂದನ್ನು ಹರಾಜು ಸಮಯದಲ್ಲಿ ಕಡ್ಡಾಯವಾಗಿ ಹಾಜರು ಪಡಿಸತಕ್ಕದ್ದು.

3) ಹರಾಜಿನಲ್ಲಿ ಹೆಚ್ಚಿನ ಮೊಬಲಗಿಗೆ ಬಿಡ್ ಮಾಡಿದವರ ಅಹವಾಲನ್ನು ಅಂಗೀಕರಿಸಲಾಗುವುದು. ಹರಾಜಿನಲ್ಲಿ ಯಾವುದೇ ಕಾರಣ ನೀಡದೆ ಬಿಡ್ ಅನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಶಿವಮೊಗ್ಗ ಇವರಿಗೆ ಇರುತ್ತದೆ.

4) ಬಿಡ್ದುದಾರರು ಅಂಗೀಕರಿಸಲಾದ ಬಿಡ್ ಮೊಬಲಗನ್ನು ಕೂಡಲೇ ಪಾವತಿಸಿ ಈ ಕಛೇರಿಯಿಂದ ಸೂಕ್ತ ರಶೀದಿಯನ್ನು ಪಡೆದು ಸಂಬಂಧಪಟ್ಟ ಪೀಠೋಪಕರಣಗಳನ್ನು ತಮ್ಮ ವಶಕ್ಕೆ ಪಡೆದುಕೊಳ್ಳತಕ್ಕದ್ದು.

5) ಸದರಿ ಹರಾಜಿನಲ್ಲಿ ಭಾಗವಹಿಸಲಿಚ್ಛಿಸುವವರು ಕಛೇರಿ ವೇಳೆಯಲ್ಲಿ ಬೆಳಿಗ್ಗೆ **10.00** ಗಂಟೆಯಿಂದ ಸಂಜೆ **5.30** ರವರೆಗೆ ಹಾಜರಾಗಿ ಶಿವಮೊಗ್ಗ ನ್ಯಾಯಾಲಯ ಸಂಕೀರ್ಣದಲ್ಲಿರಿಸಲಾದ ಅನುಪಯುಕ್ತ ಪೀಠೋಪಕರಣಗಳನ್ನು ಮೊದಲೇ ಪರೀಕ್ಷಿಸಬಹುದು.

6) ಹರಾಜು ಮುಗಿದ ನಂತರ ಹರಾಜು ಮಾಡಲಾದ ವಸ್ತುಗಳ ಸ್ಥಿತಿಗತಿಗಳ ಬಗ್ಗೆ ಯಾವುದೇ ಆಕ್ಷೇಪಣೆಗಳನ್ನು ಮಾಡುವ ಹಾಗಿಲ್ಲ.

7) ಬಹಿರಂಗ ಹರಾಜು ನಡಾವಳಿಗಳನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸುವಂತಿಲ್ಲ. ಅಂತಿಮ ತೀರ್ಮಾನ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಶಿವಮೊಗ್ಗ ಇವರದ್ದಾಗಿರುತ್ತದೆ.

(ಮಂಜುನಾಥ ನಾಯಕ್),
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಶಿವಮೊಗ್ಗ.

ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ಸಂಪರ್ಕಿಸಬಹುದು.
ಕಛೇರಿಯ ದೂರವಾಣಿ ಸಂಖ್ಯೆ **08182270321.**

ಈ ಹರಾಜು ಪ್ರಕಟಣೆಯ ಪ್ರತಿಯನ್ನು ಮಾಹಿತಿಗಾಗಿ ಹಾಗೂ ವ್ಯಾಪಕ ಪ್ರಚಾರಕ್ಕಾಗಿ ಈ ಕೆಳಕಂಡವರಿಗೆ ಕಳುಹಿಸಲಾಗಿದೆ:

1. ಶಿವಮೊಗ್ಗ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ನ್ಯಾಯಾಲಯಗಳಿಗೆ .
2. ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ , ಶಿವಮೊಗ್ಗ.
3. ಪೊಲೀಸ್ ವರಿಷ್ಠಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಶಿವಮೊಗ್ಗ.
5. ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಶಿವಮೊಗ್ಗ.
6. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ , ಶಿವಮೊಗ್ಗ.
7. ಆಯುಕ್ತರು, ನಗರಸಭೆ, ಶಿವಮೊಗ್ಗ.
8. ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಶಿವಮೊಗ್ಗ.
9. ಉಪ ವಿಭಾಗಾಧಿಕಾರಿಗಳು, ಶಿವಮೊಗ್ಗ.
10. ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಶಿವಮೊಗ್ಗ ವಿಭಾಗ , ಶಿವಮೊಗ್ಗ.
11. ವಲಯ ಅರಣ್ಯಾಧಿಕಾರಿ, ಶಂಕರ ವಲಯ, ಶಿವಮೊಗ್ಗ.
12. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಆಯನೂರು ಉಪ ವಿಭಾಗ, ಶಿವಮೊಗ್ಗ.
13. ತಹಶೀಲ್ದಾರರು, ಶಿವಮೊಗ್ಗ ತಾಲ್ಲೂಕು , ಶಿವಮೊಗ್ಗ.
14. ಉಪನಿರ್ದೇಶಕರು, ಯುವಜನ ಮತ್ತು ವಾರ್ತಾ ಇಲಾಖೆ, ಶಿವಮೊಗ್ಗ.
15. ಸಂಪಾದಕರು, ಕನ್ನಡ ಪ್ರಭ ದಿನಪತ್ರಿಕೆ, ಶಿವಮೊಗ್ಗ. ವಿಭಾಗ, ಶಿವಮೊಗ್ಗ.
16. ಸಂಪಾದಕರು, ವಿಜಯ ಕರ್ನಾಟಕ ದಿನಪತ್ರಿಕೆ, ಶಿವಮೊಗ್ಗ ವಿಭಾಗ, ಶಿವಮೊಗ್ಗ.
17. ಸಂಪಾದಕರು, ಜನವಾರ್ತೆ ದಿನಪತ್ರಿಕೆ, ಶಿವಮೊಗ್ಗ.
18. ಈ ಕಛೇರಿಯ ಸೂಚನಾ ಫಲಕಕ್ಕೆ.
19. ಶಿವಮೊಗ್ಗ ಜಿಲ್ಲಾ ನ್ಯಾಯಾಲಯದ ಅಧೀಕೃತ ವೆಬ್ ಸೈಟ್ ನಲ್ಲಿ ಪ್ರಕಟಿಸಲು.
20. ಕಛೇರಿ ಕಡತಕ್ಕೆ.

ಅನುಬಂಧ

ಹರಾಜು ಮಾಡಲಾಗುವ ಮರದ ಅನುಪಯುಕ್ತ ಪೀಠೋಪಕರಣಗಳ ವಿವರಗಳು

ಕ್ರಮ ಸಂಖ್ಯೆ	ಲಾಟ್ ನಂಬರ್‌ಗಳು ಹಾಗೂ ಅನುಪಯುಕ್ತ ಪೀಠೋಕರಣಗಳ ವಿವರಗಳು	ಪ್ರಮಾಣ
1.	ಮರದ ಕುರ್ಚಿಗಳು (with arm)	21
2	ಮರದ ಅಲಮಾರು	2
3.	ಮರದ ಪೆಟ್ಟಿಗೆ (ದೊಡ್ಡದು)	1
4.	ಮರದ ಪೆಟ್ಟಿಗೆ (ಚಿಕ್ಕದು)	1
5	ಮರದ ಪೆಟ್ಟಿಗೆ (ಮೀಡಿಯಂ ಸೈಜ್)	1
6	ಮರದ ಪುಸ್ತಕ ಇಡುವ ತಿರುಗುವ ಸ್ಟ್ಯಾಂಡ್	2
7	ಮರದ ಬೆಂಚ್ (with back)	1
8	ಮರದ ಕಿಟಕಿಯ ಬಾಗಿಲುಗಳು	7
9	ಮರದ ಬಾಗಿಲಗಳು	7
10	ಮರದ ಸ್ಟ್ಯಾಂಡ್	2
11	ಮರದ ಕಂಪ್ಯೂಟರ್ ಟೇಬಲ್	1
12	ಮರದ ಡಯಾಸ್ (with stand)	1
13	ಮರದ executive ತಿರುಗುವ ಕುರ್ಚಿ (new)	1
14	ಮರದ ಡಯಾಸ್ (ಕಾಲು ಇರದೇ ಇರುವುದು)	1

ಹರಾಜು ಮಾಡಲಾಗುವ ಸ್ಟೀಲ್ ಅನುಪಯುಕ್ತ ಪೀಠೋಪಕರಣಗಳು ಹಾಗೂ ಇತರೆ ಅನುಪಯುಕ್ತ ವಸ್ತುಗಳ ವಿವರಗಳು

ಕ್ರಮ ಸಂಖ್ಯೆ	ಲಾಟ್ ನಂಬರ್‌ಗಳು ಹಾಗೂ ಅನುಪಯುಕ್ತ ಪೀಠೋಕರಣಗಳ ವಿವರಗಳು	ಪ್ರಮಾಣ
15	ಎಸ್ ಟೈಪ್ ಸ್ಟೀಲ್ ಕುರ್ಚಿಗಳು (S type Chairs with base & back)	50
16	ಎಸ್ ಟೈಪ್ ಸ್ಟೀಲ್ ಕುರ್ಚಿಗಳು (S type Steel Chairs)	31
17	ಸ್ಟೀಲ್ ಬೆಂಚ್	07
18	ಸ್ಟೀಲ್ ಮಡಚುವ ಕುರ್ಚಿಗಳು	03
19	ಸ್ಟೀಲ್ ಟ್ರಂಕ್	01
20	ಕಬ್ಬಿಣದ ಬೆಲೆಬಾಳುವ ವಸ್ತುಗಳನ್ನು ಇಡುವ ಪೆಟ್ಟಿಗೆ (Cash Chest)	01
21	ತಿರುಗುವ ಸ್ಟೀಲ್ ಕುರ್ಚಿಗಳು (with wire base & back)	04
22	ತಿರುಗುವ ಕುರ್ಚಿಗಳು (Officers revolving chairs)	26

23	ಸ್ಟಾಂಡಿಂಗ್ ಪೆಡಲ್ ಫ್ಯಾನ್ (Standing Pedal Fan) (Compton Grieves-Super Delux)	3
24	ಬೆಲೆಬಾಳುವ ವಸ್ತುಗಳನ್ನು ಇಡುವ ಕಬ್ಬಿಣದ ಪೆಟ್ಟಿಗೆ (Cash Chest-big)	1
25	ಅಲ್ಯೂಮಿನಿಯಂ ಕಿಟಕಿಗಳು	14
26	ಕಬ್ಬಿಣದ ಕಿಟಕಿಗಳು	01
27	ಕಬ್ಬಿಣದ ಕಟ್ಟುಗಳು	01
28	ಕಬ್ಬಿಣದ ಗ್ರಿಲ್ ಗಳು	04
29	ಉದ್ದನೆಯ ಕನ್ನಡಿ	02
30	ಗೋಡೆಗೆ ಹಾಕುವ ಗಡಿಯಾರ	03
31	Panasonic Emergency Light	01
32	ಟ್ಯೂಬ್ ಲೈಟ್ ಕೇಸ್ ಗಳು	12
33	KABSONS LP 2.3 Auto Light with Gas with Glass	03
34	ಕಾರ್ ಟೈರ್ಸ (Car Tyres)	05
35	ಸ್ಟೀಲ್ ವಾಟರ್ ಫಿಲ್ಟರ್ (Steel Water Filter-8 litre)	02

6/2/17

(ಮಂಜುನಾಥ ನಾಯಕ್),
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಶಿವಮೊಗ್ಗ.